

ಮೇಲಕ್ಕೆ ಎಳೆದಿತ್ತು. ವೈದ್ಯರು ಇವರೆಲ್ಲರನ್ನೂ ಹೊರಗೆ ಹೋಗಿ ಕಾಯಲು ಹೇಳಿದರು. ಕೆಲವೇ ಸಮಯ, ಮುಂಜಾವಿನ 4 ಗಂಟೆಯ ಬ್ರಾಹ್ಮೀ ಮುಹೂರ್ತ, ತಂದೆ ಕೊನೆಯುಸಿರು ಎಳೆದರು.

* * *

ಭಾವೇಶ್ ಅವರದು ಬಹುಮುಖ ಪ್ರತಿಭೆ. ಭಾವೇಶ್ ಓರ್ವ ಉದ್ಯಮಿ, ಉದ್ಯೋಗ ಜನಕ, ಸಮಾಜ ಸೇವಕ, ಕ್ರೀಡಾಪಟು, ಜೊತೆಗೆ ಒಳ್ಳೆಯ ಕವಿ ಕೂಡಾ. ಸುಮಾರು 4500 ಶಾಯರಿಗಳನ್ನು ಬರೆದಿದ್ದಾರೆ! ಅವರ ಸೃಜನಶೀಲತೆ ಅವರು ದುಡಿಯುವ ಎಲ್ಲ ಕ್ಷೇತ್ರಗಳಲ್ಲಿಯೂ ಮಿಂಚುತ್ತದೆ.

ಸನ್‌ರೈಸ್ ಕ್ಯಾಂಡಲ್ಸ್ ಒಂದು ತಂಡದಂತೆ ದುಡಿಯುತ್ತದೆ. ಇಲ್ಲಿ ಮಾಲಿಕರಿಲ್ಲ, ಕರ್ಮಚಾರಿಗಳಿಲ್ಲ. ಒಂದು ದೊಡ್ಡ ಕುಟುಂಬದಂತೆ ಕೆಲಸ ಮಾಡುತ್ತದೆ. ಪ್ರತಿಯೊಬ್ಬ ಕುಟುಂಬದ ಸದಸ್ಯನ ಹಿತವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಯೋಜಿಸುತ್ತದೆ.

ಸನ್‌ರೈಸ್ ಕ್ಯಾಂಡಲ್ಸ್ ಅನ್ನು ಪ್ರತಿಷ್ಠಿತ ಮ್ಯಾನೇಜ್ಮೆಂಟ್ ಕಾಲೇಜುಗಳು ಕೇಸ್ ಸ್ಟಡಿಯ ರೂಪದಲ್ಲಿ ಅಧ್ಯಯನ ಮಾಡಿವೆ. ನೂರಾರು ಸಂಸ್ಥೆಗಳು, ಕಾಲೇಜುಗಳು, ಕಂಪನಿಗಳೂ ಇವರ ಸ್ಫೂರ್ತಿದಾಯಕ ಮಾತುಗಳನ್ನು ಕೇಳಲು ಆಹ್ವಾನಿಸಿವೆ. ಭಾವೇಶ್ ಮೋಟಿವೇಶನ್ ಸ್ಪೀಕರ್ ಆಗಿಯೂ ಪ್ರಸಿದ್ಧರಾಗಿದ್ದಾರೆ. ಇಸವಿ 2014ರ ಮೇ ತಿಂಗಳಿನಲ್ಲಿ ಮುಂಬಯಿಯ ಹೊಟೆಲ್ ಗ್ರಾಂಡ್ ಹಯಟ್‌ನಲ್ಲಿ ಯೋಜಿಸಿದ್ದ ಕಾನ್ಫರೆನ್ಸ್‌ಗೆ ಭಾವೇಶ್ ಅವರನ್ನು ಆಹ್ವಾನಿಸಿದ್ದರು. ಇಂಕ್ ಟಾಕ್‌ನಲ್ಲಿ ದೇಶ ವಿದೇಶಗಳ ಮಾನ್ಯರು ಮಾತನಾಡಲು ಬಂದಿದ್ದ ಸಂದರ್ಭ. ಭಾವೇಶ ಅವರಿಗೆ ಮಾತನಾಡಲು 12 ನಿಮಿಷದ ಸಮಯ ನೀಡಿದ್ದರು. ಪ್ರತಿ ಎರಡು ಮೂರು ನಿಮಿಷಕ್ಕೆ ಚಪ್ಪಾಳೆಯ ಸದ್ದು. ಭಾವೇಶರ ಮಾತು ಮುಗಿದಾಗ ಆ ದೊಡ್ಡ ಸಭಾಂಗಣದಲ್ಲಿ ಇದ್ದವರೆಲ್ಲ ಎದ್ದು ನಿಂತು ಚಪ್ಪಾಳೆ ತಟ್ಟಿ ಗೌರವಿಸಿದ್ದರು.

ಅವರ ಒಂದು ಕವಿತೆ ಅವರ ಸಂಘರ್ಷದ ಬದುಕಿಗೆ ಕನ್ನಡಿ ಹಿಡಿಯುತ್ತದೆ:

ಈ ಪುಷ್ಪಗಳು ನನಗೆ ಪಿತ್ರಾರ್ಜಿತವಾಗಿ ದಕ್ಕಿದ್ದಲ್ಲ
ನನ್ನ ಮುಳ್ಳು ಹಾಸಿದ ಹಾದಿಯನ್ನು ನೀನು ಕಂಡಿಲ್ಲ
ಹೆಜ್ಜೆ ಇಟ್ಟಾಗಲಿಂದಲೂ ನನ್ನ ದೃಷ್ಟಿ ನೆಟ್ಟಿತ್ತು ಗುರಿಯತ್ತ
ಹಾದಿ ಬದಿಯ ಮೈಲುಗಲ್ಲುಗಳತ್ತ ಕಣ್ಣು ಹೊರಳಿದ್ದೇ ಇಲ್ಲ.

ಇದು ಭಾವೇಶ್ ಅವರ ಜೀವನಗಾಥೆ, ಒಂದು ಸಾಹಸಗಾಥೆ. ಇಂದು ಕೋಟಿಗಳ ಉದ್ಯಮವಾಗಿ ಬೆಳೆದಿದೆ ಇವರ 'ಸನ್‌ರೈಸ್ ಕ್ಯಾಂಡಲ್' ಕಾರ್ಖಾನೆ. ಈ ಹಾದಿಯ ಅವರ ಪಯಣ, ಎಂತಹವರಿಗೂ ಸ್ಫೂರ್ತಿ ನೀಡಬಲ್ಲದು. ಅದರಲ್ಲೂ ಸ್ವತಃ ತಮ್ಮದೇನಾದರೂ ಆರಂಭಿಸ ಬಯಸುವ ಎಳೆಯರಿಗೆ ಯಶಸ್ವೀ ಉದ್ಯಮದ ಪಾಠಗಳನ್ನು ಹೇಳಿಕೊಡುವ ಕೈಪಿಡಿ ಆಗಬಲ್ಲದು. ತಮ್ಮೊಡನೆ ಸಮಾಜವನ್ನೂ ಬೆಳೆಸುವ ಕನಸು ಹೊತ್ತವರಿಗೆ ಇವರ ಬದುಕು ಮಾರ್ಗದರ್ಶಿ ಹೊತ್ತಿಗೆ. ಬದುಕಿನ ಭಾರದಲ್ಲಿ ಕುಸಿದು ಬದುಕು ಬೇಡೆಂದು ಕೈ ಹೊತ್ತ ಕ್ಷಣದಲ್ಲಿ ಇವರ ಕತೆ ಜೀವಕ್ಕೆ ಸಂಜೀವಿನಿ.

'ಸ್ಕೈ ಈಸ್ ದಿ ಲಿಮಿಟ್' ಎಂಬ ಮಾತಿದೆ. ಭಾವೇಶ್ ಅವರ ಬದುಕು ನನಗೆ ಮುಗಿಲು ಕೂಡಾ ಮಿತಿಯಲ್ಲ ಎಂದು ಮತ್ತೆ ಮನವರಿಕೆ ಮಾಡಿಕೊಟ್ಟಿತು. ಎಷ್ಟು ಬಾರಿ ನಮ್ಮ ಬದುಕಿಗೆ ಇಲ್ಲದ ಬೇಲಿ, ಸರಹದ್ದು ಎಲ್ಲೆಗಳನ್ನು ಹಾಕಿಕೊಳ್ಳುತ್ತೇವೆ. ಕಾಲ್ಪನಿಕ ಮಿತಿಗಳಲ್ಲಿ, ಕನಸು ಕಾಣಲೂ ಹೆದರುತ್ತೇವೆ. ಮಿತಿಗಳು ಇರುವುದು ನಿಜ. ಆದರೆ ಅವು ಹೊರಗಿಲ್ಲ, ನಮ್ಮ ಮನಸ್ಸಿನ ಒಳಗಿವೆ. ಕನಸು ಕಾಣುವ ಬನ್ನಿ ಎನ್ನುತ್ತಾರೆ ಭಾವೇಶ್. ನಿದ್ರೆಯಲ್ಲಿ ಕಾಣುವ ಕನಸುಗಳಲ್ಲ, ನಿದ್ರೆ ಬಾರದಂತೆ ಕಾಡುವ ಕನಸುಗಳನ್ನು ಕಾಣುವ ಬನ್ನಿ. ಭಾವೇಶ್ ಅವರಿಗೆ, ತಮ್ಮ ಕಣ್ಣುಗಳ ಅಂಧಕಾರದಲ್ಲಿಯೂ ಮಿತಿ ಕಾಣಲಿಲ್ಲ. ಹೃದಯದಲ್ಲಿ ಎಲ್ಲೆ ಮೀರಿದ ಪ್ರೀತಿಯ ದೀವಟಿಗೆ ಹಿಡಿದು ಹೊರಟ ಅವರದು ಬೆಳಕಿನತ್ತ ಭರವಸೆಯ ಪಯಣ. ಸಾವಿರ ಸಂಖ್ಯೆಯಲ್ಲಿ ಅಂಧರ ಬದುಕು ಬದಲಿಸಿದ ಸಾರ್ಥಕ ಪಯಣ.

(ಮುಗಿಯಿತು)

ಪ್ರತಿಕ್ರಿಯಿಸಿ: feedback@sudha.co.in

## ಹೊಸ ಧಾರಾವಾಹಿ!



# ಪಲಾಯನ

ತರುಣನೊಬ್ಬನ ಪಲಾಯನದ ಕಥೆಯನ್ನು ಆತ್ಮಕಥೆಯ ಮಾದರಿಯಲ್ಲಿ ನಿರೂಪಿಸುವ ಕಾದಂಬರಿ 'ಪಲಾಯನ'. ಸುಖದ ಭಾಗವಷ್ಟೇ ಆಗಿ ಸಂಕಟಕ್ಕೆ ಬೆನ್ನುಮಾಡುವ ವ್ಯಕ್ತಿಯೊಬ್ಬ ಬದುಕಿನ ಮೂಲಕ, ಮನುಷ್ಯನ ಮನಸ್ಸಿನ ವಂಚನೆಯ ಹಲವು ಸಾಧ್ಯತೆಗಳನ್ನು ಬಹುಸೂಕ್ಷ್ಮವಾಗಿ ಕಾದಂಬರಿ ಬಿಚ್ಚಿಡುತ್ತಾ ಹೋಗುತ್ತದೆ. ಈ ಕಥೆಯ ನಾಯಕ ತನ್ನ ಕುಟುಂಬದಿಂದ, ಅಕ್ಕರೆಯಿಂದ ಸಾಕಿ ಬೆಳೆಸಿದ ಮಾವನಿಂದ, ಮದುವೆಯಾದ ಹೆಂಡತಿಯಿಂದ, ರಕ್ಷಿಸಿದ ಗೆಳೆಯರಿಂದ ಎಲ್ಲರಿಂದಲೂ ತಪ್ಪಿಸಿಕೊಂಡು ಓಡುತ್ತ ಓಡುತ್ತ ಹೊರಟಲ್ಲಿಗೇ ಬಂದು ಸೇರುತ್ತಾನೆ. ವೃತ್ತಾಕಾರದ ಈ ಪಲಾಯನಕಥನ ಮನುಷ್ಯಸಂಬಂಧಗಳ ಶಕ್ತಿ ಮತ್ತು ದೌರ್ಬಲ್ಯಗಳೆರಡನ್ನೂ ಹೆಜ್ಜೆ ಹೆಜ್ಜೆಗೂ ಕಾಣಿಸುತ್ತ ಹೋಗುತ್ತದೆ. ವ್ಯಕ್ತಿಯೊಬ್ಬನ ಕಥೆಯ ಮೂಲಕವೇ ಆ ಕಾಲದ ಕೇರಳದ ಸಾಂಸ್ಕೃತಿಕ, ರಾಜಕೀಯ ಪಲ್ಲಟಗಳನ್ನು, ಚಳವಳಿಗಳ ಏಳುಬೀಳುಗಳನ್ನು ಸಬ್‌ಟೆಕ್ಸ್ಟ್ ರೂಪದಲ್ಲಿ ಲೇಖಕರು ದಾಖಲಿಸುತ್ತ ಹೋಗಿದ್ದಾರೆ.

ಮಲಯಾಳಂನ ಖ್ಯಾತ ಲೇಖಕ ಪ್ರಭಾಕರ್ ಪಳಸ್ಸಿ ಅವರ 'ಪಲಾಯನ' ಕಾದಂಬರಿಯನ್ನು ಖ್ಯಾತ ಅನುವಾದಕ ಕೆ.ಕೆ. ಗಂಗಾಧರನ್ ಕನ್ನಡಕ್ಕೆ ತಂದಿದ್ದಾರೆ. ಕನ್ನಡದ ಸಾಹಿತ್ಯ ಪಡಸಾಲೆಗೆ ಮಲಯಾಳಂನ ಗಾಳಿಬೆಳಕು ರೂಪದಲ್ಲಿ 'ಪಲಾಯನ' ಮುಂದಿನ ವಾರದಿಂದ ಧಾರಾವಾಹಿ ರೂಪದಲ್ಲಿ ಪ್ರಕಟಗೊಳ್ಳುತ್ತಿದೆ.